ವತಿಯಿಂದ ಹೊಂದಾಣಿಕೆ ಮಾಡಲಿಕ್ಕೂ ಸಹ ನಾವು ಸರ್ಕಾರದಿಂದ ಸುತ್ತೋಲೆಯನ್ನು ಕಳುಹಿಸಿಕೊಟ್ಟಿದ್ದೇವೆ

ಅಧ್ಯಕ್ಷರು ಈಗ ಸುರೇಶ್ ಮಾರಿಹಾಳ್, ಇಲ್ಲವೇ, ಸಿ ಎಸ್ ನಾಡಗೌಡರು ಒಂದು ನಿಮಿಷ, ನಾಡಗೌಡರೇ, ಸಚಿವರು ಮೇಲ್ಮನೆಗೆ ಹೋಗಬೇಕಾಗಿರುವುದರಿಂದ **ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ** ಅವರು ಪ್ರಶ್ನೆ ಕೇಳಲಿ ನಿಮಗೆ ಆನಂತರ ಅವಕಾಶ ಕೊಡುತ್ತೇನೆ

ಶ್ರೀ ಸಿ ಎಸ್ ನಾಡಗೌಡ ಆಯಿತು

131 (539) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) ಮಾನ್ಯ ಗ್ರಾಮೀಣ ನೀರು ಪೂರೈಕೆ ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

ಅ) ಹುಬ್ಬಳ್ಳಿ – ಧಾರವಾಡ ಕುಡಿಯುವ ನೀರಿನ ಸರಬರಾಜು ಯೋಜನೆಯಿಂದ ಯಡಳ್ಳಿ – ಸಂಗ್ರೇಶಕೊಪ್ಪ ಗ್ರಾಮಗಳಿಗೆ ಕುಡಿಯುವ ನೀರಿನ ಸರಬರಾಜು ಯೋಜನೆ ಪೂರ್ಣಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹುಬ್ಬಳ್ಳಿ – ಧಾರವಾಡ ಕುಡಿಯುವ ನೀರಿನ ಸರಬರಾಜು ಯೋಜನೆಯ ವೈಪುಗಳ ಮುಖಾಂತರ ನೀರು ಪೂರೈಸಲು ಅನುಮತಿ ದೊರಕದೇ ಯಡಳ್ಳಿ – ಸಂಗ್ರೇಶಕೊಪ್ಪ ಯೋಜನೆ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, (ಕಾರಣಗಳೊಂದಿಗೆ ಮಾಹಿತಿ ನೀಡುವುದು),

ಇ) ಯಡಳ್ಳಿ – ಸಂಗ್ರೇಶಕೊಪ್ಪ ಕುಡಿಯುವ ನೀರಿನ ಯೋಜನೆ ಪೂರ್ಣಗೊಳಿಸಲು ಸರ್ಕಾರದ ಕ್ರಮ ಏನು?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)–

ಅ) ಬಂದಿದೆ

ಆ) ಅಗತ್ಯವಿರುವ ಪರವಾನಗಿಯನ್ನು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಿಂದ ಪಡೆಯಲು ಕ್ರಮ ವಹಿಸಲಾಗಿದೆ KUWSDB ಈ 2 – ಗ್ರಾಮಗಳಿಗೆ ಅಗತ್ಯವಿರುವ 2 50 ಲಕ್ಷ ಲೀ ನೀರನ್ನು ಪ್ರತಿ ದಿನ ಒದಗಿಸಲು ಒಪ್ಪಿರುತ್ತದೆ

ಇ) ರೂ 36 50 ಲಕ್ಷ ಅಂದಾಜಿನ ಈ ಯೋಜನೆಗೆ ARWSP ಯಡಿ ಅನುಮೋದನೆ ನೀಡಲಾಗಿದ್ದು, ಯಡಳ್ಳಿ ಹಾಗೂ ಸಂಗ್ರೇಶಕೊಪ್ಪ ಗ್ರಾಮಗಳಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆಯಾಗುತ್ತದೆ ಸ್ಥಳದ ಕಾಮಗಾರಿಯನ್ನು ಈಗಾಗಲೇ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ಸೆಪ್ಟೆಂಬರ್-07ರೊಳಗಾಗಿ ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ

ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ ಉತ್ತರವನ್ನೇನೋ ಕೊಟ್ಟಿದ್ದಾರೆ ಹುಬ್ಬಳ್ಳಿ ಧಾರವಾಡ ಅರ್ಬನ್ ವಾಟರ್ ಸಪ್ಲೈನಿಂದ on going villages ಆಗಿರುವುದರಿಂದ ಯಡಳ್ಳಿ ಸಂಗ್ರೇಶಕೊಪ್ಪಕ್ಕೆ ನೀರನ್ನು ಕೊಡಬೇಕೆಂದು ಹೇಳಿ ನಾವು ಅರ್ಜಿ ಹಾಕಿದ್ದೇವೆ ಆ ರೀತಿಯಾಗಿ ಮಾಡಲು ಜಲಮಂಡಳಿಯವರು ಕೂಡ ಪರ್ಮಿಷನ್ ಕೊಟ್ಟಿದ್ದಾರೆ ಆದರೆ ಹುಬ್ಬಳ್ಳಿ ಧಾರವಾಡ ಅರ್ಬನ್ ವಾಟರ್ ಸಪ್ಲೈನವರಿಂದ concurrence ತೆಗೆದುಕೊಳ್ಳಬೇಕೆಂದು ಹೇಳಿದ್ದರು ಹುಬ್ಬಳ್ಳಿ ಧಾರವಾಡ ಅರ್ಬನ್ ವಾಟರ್ ಸಪ್ಲೈನವರು ಪರ್ಮಿಷನ್ ಕೊಟ್ಟ ಮೇಲೆ HDMCಗೆ ಪರ್ಮಿಷನ್ ತೆಗೆದುಕೊಳ್ಳಬೇಕೆಂದು concurrence ಕೊಡಬೇಕಾಗಿತ್ತು ಆದರೆ ಅವರು 40 00 ಲಕ್ಷ ರೂಗಳನ್ನು ಕಟ್ಟಬೇಕೆಂದು conditional ಆಗಿ ಪರ್ಮಿಷನ್ ಕೊಟ್ಟಿದ್ದಾರೆ ನಾವು ಪ್ರಾಜೆಕ್ಟ್‌ಗೆ 36 00 ಲಕ್ಷ ರೂಗಳನ್ನು ಖರ್ಚು ಮಾಡಿ ಜಿಲ್ಲಾ ಪಂಚಾಯಿತಿಯಿಂದ ಪೈಪ್ ಲೈನ್‌ಗಳನ್ನು ಹಾಕಿಸಿದ್ದೇವೆ ಮುನಿಸಿಪಾಲಿಟಿಯವರು 36 00 ಲಕ್ಷ ರೂಗಳ projectಗೆ 40 00 ಲಕ್ಷ ರೂಗಳನ್ನು ಕಟ್ಟಬೇಕೆಂದು ಹೇಳಿದ್ದಾರೆ ಯಾವ ಪಂಚಾಯಿತಿಯಲ್ಲಿ 40 00 ಲಕ್ಷ ರೂಗಳ ಹಣವಿರುತ್ತದೆ On going villages ಆಗಿರುವುದರಿಂದ ಕಾಯ್ದೆ ಬದ್ಧವಾಗಿ ಅವರಿಗೆ ನೀರು ಕೊಡಬೇಕಾಗುತ್ತದೆ ಆದರೆ ಹಿಂದೆ ಕೊಟ್ಟಂಥ ಹಳ್ಳಿಗಳಿಗೆ ಈ ರೀತಿ ಹಣವನ್ನೇನು ಕಟ್ಟಿಸಿಕೊಂಡಿಲ್ಲ 36 00 ಲಕ್ಷ ರೂಗಳನ್ನು ಖರ್ಚು ಮಾಡಿರತಕ್ಕಂಥ ಪೈಪ್‌ಲೈನಿಗೆ ಆ ಪ್ರಾಜೆಕ್ಟ್ complete ಆದರೂ ಕೂಡ ಇವರು ಪರ್ಮಿಷನ್ ಕೊಡಲಿಕ್ಕೆ 40 00 ಲಕ್ಷರೂಗಳನ್ನು ಕಟ್ಟಬೇಕೆಂದು ಕೇಳುತ್ತಿದ್ದಾರೆ ದಯವಿಟ್ಟು ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕು

ಶ್ರೀ ಎಸ್ ಎ ರವೀಂದ್ರನಾಥ್(ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) ಈ ಪ್ರಾಜೆಕ್ಟ್‌ಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ನಲವತ್ತು ಲಕ್ಷ ರೂಗಳನ್ನು ಕಟ್ಟಿಲಿಕ್ಕೆ

ಹೇಳಿದ್ದಾರೆ ಅವರನ್ನು ಕರೆಸಿ , ಮಾನ್ಯ ಶಾಸಕರನ್ನು ಕರೆಸಿ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಮಾಡಿಸಿ ಆ ಹಣವನ್ನು ಸಹ ಸರ್ಕಾರದಿಂದ ತುಂಬಲಿಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ

ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ ನೀವು ಕರೆಸುವವರೆಗೆ ಪರ್ಮಿಷನ್ ಆದರೂ ಕೊಡಿಸಿ ಈಗಾಗಲೇ ಪ್ರಾಜೆಕ್ಟ್ ಕಂಪ್ಲೀಟ್ ಆಗಿ ಒಂದು ವರ್ಷವಾಯಿತು /ಪೈಪ್‌ಲೈನ್ ವ್ಯವಸ್ಥೆಯೆಲ್ಲಾ ಕಂಪ್ಲೀಟ್ ಆಗಿದೆ ಅದಕ್ಕೆ ಪರ್ಮಿಷನ್ ಆದರೂ ಕೊಡಿ ಹಣ ಕಟ್ಟಿಸುವುದೇನಿದ್ದರೂ, ನಾವು ಮಾಡಬಹುದು ನಾವು, ನೀವು ಕುಳಿತು ಸಂಧಾನ ಮಾಡಿ ಕಟ್ಟಬೇಕಾಗಿರುವ ಹಣವನ್ನು ಕಟ್ಟೋಣವಂತೆ ಅಷ್ಟರವರೆಗೆ ನಮಗೆ ನೀರು ಡ್ರಾ ಮಾಡಲಿಕ್ಕೆ ಅನುಮತಿ ಕೊಡಬೇಕು

ಶ್ರೀ ಎಸ್ ಎ ರವೀಂದ್ರನಾಥ್(ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) ಅವರನ್ನು ಮುಂದಿನ ವಾರವೇ ಕರೆಸಿ ನಾನು ಮಾತನಾಡುತ್ತೇನೆ

ಅಧ್ಯಕ್ಷರು ವೆಂಕಟಮುನಿಯಪ್ಪನವರು ಪ್ರಶ್ನೆಯನ್ನು ಕೇಳಿ

ಬಂಗಾರಪೇಟೆ ಎಪಿಎಂಸಿ ಕಾಮಗಾರಿಗಳು

122 (980)– ಶ್ರೀ ವೆಂಕಟಮುನಿಯಪ್ಪ ಬಿ ಪಿ (ಬೇತಮಂಗಲ)– ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಸಾಲಿನಲ್ಲಿ ಬಂಗಾರಪೇಟೆ ತಾಲ್ಲೂಕಿನ ಎಪಿಎಂಸಿ ಪ್ರಾಂಗಣದಲ್ಲಿ ನಿರ್ಮಾಣಗೊಳ್ಳುತ್ತಿರುವ ಕಟ್ಟಡಗಳಿಗೆ ಮಂಜೂರಾದ ಮೊಬಲಗು ಎಷ್ಟು,

ಆ) ಈ ಕೊರಡಿಗಳು ಹಾಗೂ ಇತರೆ ಉಗ್ರಾಣದ ಕಾಮಗಾರಿ ಅವಶ್ಯಕತೆ ಇದೆಯೇ,

ಇ) ಇದ್ದಲ್ಲಿ, ಈ ಹಿಂದೆ ನಿರ್ಮಾಣಗೊಂಡಿರುವ ವಾಣಿಜ್ಯ ಮಳಿಗೆಯ ಅಂಗಡಿಗಳು ಖಾಲಿಯಿರಲು ಕಾರಣವೇನು,

ಈ) ಈಗ ನಡೆಯುತ್ತಿರುವ ಕಾಮಗಾರಿಗಳು ಬಹಳಷ್ಟು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು ಯಾವುದು,